ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19, ಲಸಿಕೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE: 12/4/21

ಅಧಿಕಾರಿ ರಿ

## 4 ದಿನಗಳ ಲಸಿಕೆ ಉತ್ಸವ ಆರಂಭ | 3 ರಾಜ್ಯಗಳಲ್ಲಿ ವ್ಯಾಕ್ಸಿನ್ ತೀವ್ರ ಕೊರತೆ

## ರಾಜ್ಯದಲ್ಲಿ 10,000 ಗಡಿ ದಾಟಿದ ಕೊರೊನಾ | ಪೂರ್ಣ ಲಾಕ್‌ನತ್ತ ಮಹಾರಾಷ್ಟ್ರ

# ಲಸಿಕೆ ಜಾತ್ರೆಗೇ ಸೋಂಕು ಏರಿಕೆ

**ಹೊಸದಿಲ್ಲಿ:** ಕೊರೊನಾ ವಿರುದ್ಧ ಸಂಘಟಿತ ಸಮರಕ್ಕಾಗಿ ದೇಶದಲ್ಲಿ ನಾಲ್ಕು ದಿನಗಳ ಲಸಿಕಾ ಉತ್ಸವ ಚಾಲನೆ ಪಡೆದುಕೊಂಡ ನಡುವೆಯೇ ಸೋಂಕಿನ ಅಬ್ಬರವೂ ತಾರಕಕ್ಕೇರಿದೆ. ಒಂದೇ ದಿನ ದೇಶದಲ್ಲಿ 1.5 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದರೆ, ಕರ್ನಾಟಕದಲ್ಲಿ ಎರಡನೇ ಅಲೆಯಲ್ಲಿ ಮೊದಲ ಬಾರಿಗೆ 10000ದ ಗಡಿ ದಾಟಿದೆ. ಅತಿ ಹೆಚ್ಚು ಸೋಂಕು ದಾಖಲಾಗುತ್ತಿರುವ ಮಹಾರಾಷ್ಟ್ರದಲ್ಲಿ ಪೂರ್ಣ ಪ್ರಮಾಣದ ಲಾಕ್‌ಡೌನ್‌ನ ಸಾಧ್ಯತೆಗಳು ದಟ್ಟವಾಗುತ್ತಿವೆ.



ಈ ನಡುವೆ, ಮಹಾರಾಷ್ಟ್ರ, ರಾಜಸ್ಥಾನ, ದಿಲ್ಲಿ ರಾಜ್ಯಗಳಲ್ಲಿ ಲಸಿಕೆಯ ತೀವ್ರ ಕೊರತೆ ಎದುರಾಗಿದ್ದು, ಲಸಿಕೋತ್ಸವ ಅರ್ಥ ಕಳೆದುಕೊಂಡಿದೆ. ಛತ್ತೀಸ್‌ಗಢ, ತೆಲಂಗಾಣ, ಪಂಜಾಬ್, ಒಡಿಶಾ, ಆಂಧ್ರ ಪ್ರದೇಶ, ಜಾರ್ಖಂಡ್ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಇನ್ನು ಕೆಲವೇ ದಿನಗಳಿಗೆ ಬೇಕಾಗುವಷ್ಟು ಲಸಿಕೆ ಲಭ್ಯವಿದೆ.

ಲಸಿಕಾ ಉತ್ಸವದ ಆರಂಭಕ್ಕೆ ಶುಭ ಸಂದೇಶ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ದೇಶದ ಮೂಲೆ ಮೂಲೆಗೂ ಲಸಿಕೆ ತಲುಪಿಸಿ ಅಭಿಯಾನ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

- ಅರ್ಹರು ಲಸಿಕೆ ಪಡೆಯಿರಿ, ಇನ್ನೊಬ್ಬರನ್ನೂ ಪ್ರೇರೇಪಿಸಿ
- ಕೋವಿಡ್ ಸೋಂಕಿತರಿಗೆ ಚಿಕಿತ್ಸೆ ಪಡೆಯಲು ನೆರವಾಗಿ
- ಮಾಸ್ಕ್ ಧರಿಸಿ, ಇತರರೂ ಧರಿಸುವಂತೆ ಉತ್ತೇಜಿಸಿ
- ಪಾಸಿಟಿವ್ ಕಂಡುಬಂದರೆ ಸಣ್ಣ ಪ್ರಮಾಣದ ಕಂಟೇನ್ಮೆಂಟ್ ಝೋನ್ ರೂಪಿಸಿ



ರಾಜ್ಯದಲ್ಲಿ ಸೋಂಕಿನ ಸಂಖ್ಯೆ ದಿನ ಕಳೆದಂತೆ ಹೆಚ್ಚಾಗುತ್ತಿದ್ದು, ಭಾನುವಾರ 10,250 ಪ್ರಕರಣ ದಾಖಲಾಗಿದೆ. 40 ಮಂದಿ ಮೃತಪಟ್ಟಿದ್ದಾರೆ. ಬೆಂಗಳೂರೊಂದರಲ್ಲೇ 7584 ಕೇಸುಗಳು ದಾಖಲಾಗಿರುವುದು ಆತಂಕಕ್ಕೆ ಕಾರಣವಾಗಿದೆ. ರಾಜ್ಯದಲ್ಲಿ ಪ್ರಸಕ್ತ 69,225 ಸಕ್ರಿಯ ಪ್ರಕರಣಗಳಿದ್ದು, ಇದರಲ್ಲಿ 51,236 ಬೆಂಗಳೂರಿನಲ್ಲೇ ಇವೆ. ರಾಜ್ಯದಲ್ಲಿ 340 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

### ರೆಮ್‌ಡಿಸಿವಿರ್ ರಫ್ತು ನಿಷೇಧ



ಕೊರೊನಾ ರೋಗಿಗಳ ಚಿಕಿತ್ಸೆಗೆ ಬಳಸಲಾಗುವ ರೆಮ್‌ಡಿಸಿವಿರ್ ಇಂಜೆಕ್ಷನ್ ಕೊರತೆ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಅದನ್ನು ಬೇರೆ ದೇಶಗಳಿಗೆ ರಫ್ತು ಮಾಡುವುದನ್ನು ನಿಷೇಧಿಸಿದೆ. ಕೊರೊನಾ ಪರಿಸ್ಥಿತಿ ಸುಧಾರಣೆ ವರೆಗೆ ಈ ನಿಷೇಧ ಮುಂದುವರಿಯಲಿದೆ.

ಮುಂದಿನ 10 ದಿನದಲ್ಲಿ ರಷ್ಯಾದ ಸ್ಪುಟ್ನಿಕ್ ವಿ ಲಸಿಕೆ ಪ್ರಯೋಗಕ್ಕೆ ಸಮ್ಮತಿ ಸಿಗಲಿದೆ. ಉಳಿದಂತೆ ಬಯಾಲಜಿಕಲ್-ಇ, ಝೈಡಸ್ ಕ್ಯಾಡಿಲಾ, ನೇಸಲ್ ಸ್ಪ್ರೇ, ನೊವಾವ್ಯಾಕ್ಸ್ ಎಂಬ ಐದು ಲಸಿಕೆಗಳು ಅಕ್ಟೋಬರ್ ವೇಳೆಗೆ ದೊರೆಯಲಿವೆ.

ಕೋವಿಡ್ ನಿಯಂತ್ರಣಕ್ಕೆ ರಾಜ್ಯ ಕೈಗೊಂಡ ಕ್ರಮಗಳ ಬಗ್ಗೆ ಪ್ರಧಾನಿ ಮೋದಿ ಅವರು ಭಾನುವಾರ ಸಿಎಂ ಯಡಿಯೂರಪ್ಪ ಅವರಿಂದ ಮಾಹಿತಿ ಪಡೆದುಕೊಂಡರು. ಅಗತ್ಯವೆನಿಸಿದರೆ ರಾಜ್ಯದಲ್ಲಿ ಇನ್ನಷ್ಟು ಬಿಗಿ ಕ್ರಮ ಕೈಗೊಳ್ಳಲಾಗುವುದು, ಆದರೆ, ಲಾಕ್‌ಡೌನ್ ಮಾಡುವ ಪರಿಸ್ಥಿತಿ ಇಲ್ಲ ಎಂದು ಸಿಎಂ ಅವರು ಪ್ರಧಾನಿಗೆ ವಿವರಿಸಿದರು.

ದೇಶದಲ್ಲಿ ಯಾವುದೇ ಕಾರಣಕ್ಕೂ ಭಾಗಶಃ ಲಾಕ್‌ಡೌನ್ ಕೂಡಾ ಬೇಡ ಎಂಬ ಅಭಿಪ್ರಾಯ ಭಾರತೀಯ ಉದ್ಯಮ ಒಕ್ಕೂಟದ ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ. ಲಸಿಕಾ ಕಾರ್ಯಕ್ರಮ ಸರಿಯಾಗಿ ನಡೆಯಲಿ, ಸುರಕ್ಷತಾ ನಿಯಮ ಪಾಲನೆಯಾಗಲಿ, ಲಾಕ್‌ಡೌನ್ ಬೇಡ ಎಂದು ಸಮೀಕ್ಷೆ ಹೇಳಿದೆ.